ಅ) ಸರ್ವೀಸ್ ಮೈನ್‌ನಿಂದ 10 ಕಂಬದವರೆಗೆ ರೈತರೇ ಸಾಮಾನುಗಳನ್ನು ಕೊಂಡು ತಂದು ಹಾಕಿ ದುಬಾರಿ ವೆಚ್ಚ ಭರಿಸಿರುವುದನ್ನು ಸರ್ಕಾರ ಗಮನಿಸಿದೆಯೇ;

ಇ) ಹಾಗಿದ್ದಲ್ಲಿ, ಒಂದೇ ದರ ನಿಗದಿ ಮಾಡಿ ಎಲ್ಲಾ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಅನುಕೂಲ ಮಾಡಲಾಗುವುದೇ;

ಈ) ಈಗಿರುವ ಗಡುವನ್ನು ವಿಸ್ತರಿಸಲಾಗುವುದೆ?

ಶ್ರೀ ಬಸವರಾಜ್ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಅಕ್ರಮ ಪಂಪುಸೆಟ್ಟುಗಳ ಸಕ್ರಮೀಕರಣ ಕಾರ್ಯದಲ್ಲಿ ರಾಜ್ಯದಲ್ಲಿ ಸರ್ಕಾರದ ಇತ್ತೀಚಿನ ಆದೇಶಗಳ ಮೇರೆಗೆ (ಅಂದರೆ ಕಳವು ವಿರೋಧಿ ಕಾನೂನು ಜಾರಿಗೊಳಿಸುವುದಕ್ಕೆ ಮುನ್ನ ಹಾಗೂಅಕ್ರಮ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ ವಿಸ್ತರಿಸಿದ ಅವಧಿಯ ಆದೇಶದನ್ವಯ) 31-5-2002 ರ ಅಂತ್ಯದವರೆಗೆ ಒಟ್ಟು 77828 ಅಕ್ರಮ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮೀಕರಣಗೊಳಿಸಲಾಗಿದೆ.

ಆ) ಗಮನಿಸಿದೆ.

ಇ) ಸದ್ಯದ ಪರಿಸ್ಥಿತಿಯಲ್ಲಿ ಇದು ಸಾಧ್ಯವಾಗುವುದಿಲ್ಲ.

ಈ) ಇಲ್ಲ ಗಡುವನ್ನು ವಿಸ್ತರಿಸಲಾಗುತ್ತಿಲ್ಲ.

ಚಿಕ್ಕಮಗಳೂರು ಜಿಲ್ಲೆ ಮದಗದಕೆರೆ ಮತ್ತುಜ್ಯ ನಕೆರೆ ಅಭಿವೃದ್ಧಿ

1067 (1206) - ಶ್ರೀ ಕೆ.ಜಿ. ಮಲ್ಲಿಕಾರ್ಜುನ (ಬೀರೂರು) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಮದಗದಗ ಕೆರೆ ಮತ್ತು ಅಯ್ಯನಕೆರೆ ಅಭಿವೃದ್ಧಿಗೆ ನಬಾರ್ಡ್ ಯೋಜನೆಯಿಂದ ಹಣ ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಹಣ ಮಂಜೂರು ಮಾಡಲಾಗಿದೆ. ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆ ಮದಗದ ಕೆರೆ ಮತ್ತು ಅಯ್ಯನ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ನಬಾರ್ಡ್ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲು ಸಂಪುಟ ಉಪ ಸಮಿತಿಯಿಂದ ಅನುಮೋದನೆ ದೊರೆತಿರುತ್ತದೆ. ನಬಾರ್ಡ್‌ನಿಂದ ಹಣ ಮಂಜೂರಾಗಿರುವುದಿಲ್ಲ.

ಆ) ಸದರಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ. 125.00 ಲಕ್ಷವಾಗಿದ್ದು, ಇದಕ್ಕೆ ನಬಾರ್ಡ್‌ನಿಂದ ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ ಕುರಿತು

1070 (1472) - ಶ್ರೀ ಮನೋಹರ್ ಪಿ. ಕಡೋಲ್ಕರ್ (ಉಚ್ಚಗಾಂವ್) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದವನ್ನು ಬಗೆಹರಿಸಲು ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ಸರ್ಕಾರದೊಂದಿಗೆ ಚರ್ಚಿಸಲಿದೆಯೇ?